ಶ್ರೀ ಬಿ. ರಾಚಯ್ಯ (ಕೃಷಿ ಮತ್ತು ಅರಣ್ಯ ಸಚಿವರು).—

ಅ) ಸಮಗ್ರ ಬೆಳೆ ವಿಮಾ ಯೋಜನೆಯಡಿಯಲ್ಲಿ ಬೆಳೆ ನಷ್ಟ ಪರಿಹಾರವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ೨:೧ರ ಪ್ರಮಾಣದಲ್ಲಿ ಭರಿಸಬೇಕು ನಷ್ಟ ಪರಿಹಾರದ ಸಾಮಾನ್ಯ ವಿಮಾ ನಿಗಮದ ಪ್ರಸ್ತಾವನೆಗೆ ಮೊದಲು ಕೇಂದ್ರ ಸರ್ಕಾರವು ಮಂಜೂರಾತಿ ನೀಡಬೇಕು. ೧೯೮೭–೮೮ರ ಮುಂಗಾರು ಮತ್ತು ಹಿಂಗಾರು ಬೇಸಿಗೆಬೆಳೆಗಳ ನಷ್ಟದಪರಿಹಾರ ನೀಡುವ ಪ್ರಸ್ತಾವನೆಗೆ ಕೇಂದ್ರಸರ್ಕಾರವು ೧೯೮೮ರ ಡಿಸೆಂಬರ್ ವೇತ್ತು ೧೯೮೯ರ ಜನವರಿಯಲ್ಲಿ ಮಂಜೂರಾತಿಯನ್ನು ಅನುಕ್ರಮವಾಗಿ ನೀಡಿರುತ್ತದೆ. ಇದಲ್ಲದೆ, ೧೯೮೭–೮೮ನೇ ಸಾಲಿಗೆ ಸಂಬಂಧಿಸಿದಂತೆ ರಾಜ್ಯದ ಬೆಳೆ ವಿಮಾ ನಿಧಿಗೆ ಕೇಂದ್ರ ಸರ್ಕಾರವು ತನ್ನ ಪಾಲಾದ ೫೦.೨೦ ಲಕ್ಷ ರೂ.ಗಳನ್ನು ಇದುವರೆವಿಗೂ ನೀಡಿರುವುದಿಲ್ಲ. ಈ ಎಲ್ಲಾ ಕಾರಣಗಳಿಂದ ೧೯೮೭–೮೮ನೇ ಸಾಲಿನ ಬೆಳೆಗಳ ನಷ್ಟ ಪರಿಹಾರವನ್ನು ಬಿಡುಗಡೆ ಮಾಡಲು ಇದುವರೆಗೆ ಸಾಧ್ಯವಾಗಿರುವುದಿಲ್ಲ.

ಆ) ವಿಮಾ ಹಣವನ್ನು ಬಿಡುಗಡೆ ಮಾಡುವಲ್ಲಿ ವಿಳಂಬವಾದ ಪಕ್ಷದಲ್ಲಿ ರೈತರ ಸಾಲಕ್ಕೆ ಬಡ್ಡಿಯನ್ನು ವಿಧಿಸದಿರಲು ಸಮಗ್ರ ಬೆಳೆ ವಿಮಾ ಯೋಜನೆಯಡಿಯಲ್ಲಿ ಅವಕಾಶವಿರುವುದಿಲ್ಲ.

## ಕರ್ನಾಟಕ ರಾಜ್ಯದಲ್ಲಿರುವ ಪ್ರಾಥಮಿಕ ಶಾಲೆ ಪ್ರೌಢಶಾಲೆ,ಕಿರಿಯ ಕಾಲೇಜುಗಳಲ್ಲಿ ಖಾಲಿ ಇರುವ ಹುದ್ದೆಗಳಬಗ್ಗೆ

೨೫೫ ಶ್ರೀ ಕೆ.ವಸಂತ ಬಂಗೇರ (ಬೆಳ್ತಂಗಡಿ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ರಾಜ್ಯದಲ್ಲಿರುವ ಪ್ರಾಥಮಿಕ ಶಾಲೆ ಪ್ರೌಢಶಾಲೆ, ಕಿರಿಯ ಕಾಲೇಜು ಮತ್ತು ಕಾಲೇಜುಗಳಲ್ಲಿ ಖಾಲಿ ಇರುವ ಅಧ್ಯಾಪಕರ ಹುದ್ದೆಗಳೆಷ್ಟು ?

(ಪ್ರತ್ಯೇಕವಾಗಿ ನೀಡುವುದು)

ಆ) ಪ್ರಕೃತ ಇರುವ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಅಧ್ಯಾಪಕರ ಖಾಲಿ ಹುದ್ದೆಗಳನ್ನು ಭರ್ತಿ ಮಾಡಬೇಕಿದ್ದರೆ ಬೇಕಾದ ಅಧ್ಯಾಪಕರ ಸಂಖ್ಯೆ ಎಷ್ಟು ?

ಇ) ಎಷ್ಟು ಸಮಯದ ಒಳಗೆ ಈ ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು ?

ಶ್ರೀ ಎಂ.ಚಂದ್ರಶೇಖರ್ (ಶಿಕ್ಷಣ ಮಂತ್ರಿಗಳು),—

ಅ)

| | ಖಾಲಿ ಅಧ್ಯಾಪಕರ ಹುದ್ದೆಗಳು |
|---|---|
| ಪ್ರಾಥಮಿಕಶಾಲೆ | ೯೫೨೬ |
| ಪ್ರೌಢ ಶಾಲೆ | ೧೦೪೪ |
| ಕಿರಿಯ ಕಾಲೇಜು | ೨೫೪ |
| ಕಾಲೇಜು | ೨೨೧ |
| ಆ) ಪ್ರಾಥಮಿಕ ಶಾಲೆ | ೮೦೦೦ |
| ಪ್ರೌಢಶಾಲೆ | |
| ಕಿರಿಯ ಕಾಲೇಜು | ೨೩೫ |
| ಕಾಲೇಜು | ೫೦೦ |

ಇ) ಕಷ್ಟು ಹಲಗೆ ಯೋಜನೆಯಡಿಯಲ್ಲಿ,

೧) ಪ್ರಾಥಮಿಕ ಶಾಲೆಗಳಲ್ಲಿನ ಖಾಲಿ ಶಿಕ್ಷಕರ ಹುದ್ದೆಗಳನ್ನು ಬೇಸಿಗೆ ರಜೆ ಮುಗಿದ ನಂತರ ಹಾಗೂ ಶಾಲೆಗಳು ಪುನರ್ ಆರಂಭವಾಗುವ ಮೊದಲು ಭರ್ತಿ ಮಾಡಲಾಗುವುದು.

೨) ಪ್ರೌಢ ಶಾಲಾ ಶಿಕ್ಷಕರ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ನೇಮಕಾತಿ ಸಮಿತಿಗಳು ಈಗಾಗಲೇ ಕ್ರಮ ತೆಗೆದುಕೊಂಡಿವೆ.

೩) ಕಿರಿಯ ಕಾಲೇಜಿನಲ್ಲಿ ಖಾಲಿ ಇರುವ ಉಪನ್ಯಾಸಕರ ಹುದ್ದೆಗಳನ್ನು ಭರ್ತಿ ಮಾಡಲು ಬೇಗನೇ ಕ್ರಮ ತೆಗೆದುಕೊಳ್ಳಲಾಗುವುದು.